**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,**

**ಹೊನ್ನಾಳಿ**

**ಸಿ.ಸಿ. ನಂ. 76/2024**

ಪಿರ್ಯಾದುದಾರರು ಃ ಹೊನ್ನಾಳಿ ಪೊಲೀಸರು.

- ವಿರುದ್ಧ -

ಆರೋಪಿತರು

1. ಪರಮೇಶ್ವರಪ್ಪ ಡಿ ಬಿನ್ ಸಿದ್ದಲಿಂಗಪ್ಪ, 58 ವರ್ಷ

2.ಹಾಲಸಿದ್ದಪ್ಪ ಡಿ ಬಿನ್ ಸಿದ್ದಲಿಂಗಪ್ಪ, 54 ವರ್ಷ

3.ಮಂಜುನಾಥ ಡಿ ಹೆಚ್ ಬಿನ್ ಹಾಲಸಿದ್ದಪ್ಪ, 26 ವರ್ಷ

4. ಮನು ಡಿ ಹೆಚ್ ಬಿನ್ ಹಾಲಸಿದ್ದಪ್ಪ, 23 ವರ್ಷ,

ಆ-1 ರಿಂದ 4 , 8 ರವರ ವಾಸಃ ತುಗ್ಗಲಹಳ್ಳಿ ಗ್ರಾಮ

ಹೊನ್ನಾಳಿ ತಾಲ್ಲೂಕು.

5. ವೀರನಗೌಡ ಯಾನೆ ಈರನಗೌಡ ಟಿ ಕೆ ಬಿನ್ ಕುಬೇರಗೌಡ ಟಿ, 28 ವರ್ಷ

6. ಬಸವನಗೌಡ ಕೆ ಟಿ ಬಿನ್ ಕುಬೇರಗೌಡ ಟಿ, 32 ವರ್ಷ

7. ರೇಖಾ ಕೊಂ ಕುಬೇರಗೌಡ, 57 ವರ್ಷ

ಆ-5 ರಿಂದ 7 ರವರ ವಾಸಃ ತಿಮ್ಮೆನಹಳ್ಳಿ ಗ್ರಾಮ

ಹೊನ್ನಾಳಿ ತಾಲ್ಲೂಕು.

8. ಅನುಸೂಯಮ್ಮ ತಂದೆ ಹಾಲಸಿದ್ದಪ್ಪ, 47 ವರ್ಷ

9. ಅಮೃತಮ್ಮ ಕೋಂ ಈಶ್ವರಪ್ಪ, 60 ವರ್ಷ

10 ಹನುಮಂತಪ್ಪ ಬಿನ್ ಈಶ್ವರಪ್ಪ, 54 ವರ್ಷ

ಆ-9 ಮತ್ತು 10 ರವರ ವಾಸಃ ಸನ್ಯಾಸಿ ಕೋಡಮಗ್ಗಿ ಗ್ರಾಮ

ಭದ್ರಾವತಿ ತಾಲ್ಲೂಕು.

**ದೋಷಾರೋಪಣೆ ಃ**

ಶ್ರೀ. ದೇವದಾಸ್ ಹೆಚ್., ಬಿ.ಎ., ಎಲ್‌ಎಲ್.ಬಿ. ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊನ್ನಾಳಿ ಆದ ನಾನು ಮಾಡಿದ ದೋಷಾರೋಪಣೆ ಏನೆಂದರೆಃ

ದಿನಾಂಕಃ 22-05-2023 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಹೊನ್ನಾಳಿ ತಾಲ್ಲೂಕು ತುಗ್ಗಲಹಳ್ಳಿ ಗ್ರಾಮದ ಸಾಕ್ಷಿ-1 ಜಯ್ಯಪ್ಪ ಡಿ ರವರ ವಾಸದ ಮನೆಗೆ ಆರೋಪಿತರೆಲ್ಲರೂ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದಿರುತ್ತೀರಿ ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.143 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

2. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಅಕ್ರಮಗುಂಪು ಕಟ್ಟಿಕೊಂಡು ಬಂದು ದೊಂಬಿಯನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.147 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

3. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಕೈಯಲ್ಲಿ ಕಣಿಗೆ, ಕಲ್ಲು, ಮಚ್ಚು ಹಿಡಿದುಕೊಂಡು ಬಂದಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.148 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

4. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ-1 ರವರ ಮನೆಗೆ ಅತೀಕ್ರಮ ಪ್ರವೇಶ

ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.448 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

5. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ-1 ರವರಿಗೆ ಸೂಳೇಮಕ್ಕಳ, ಲೇ ಮಿಂಡ್ರಿ ಮಕ್ಕಳ, ಲೇ ಬೋಳಿ ಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.504 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

6. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಆಸ್ತಿ, ಬಂಗಾರ, ದುಡ್ಡು ಮಷಿನ್ ಕೊಡ್ರುಲೇ ಎಂದು ಕೂಗೂತ್ತಾ ಸಾಕ್ಷಿ-1 ರಿಂದ 9 ರವರಾದ ಜಯ್ಯಪ್ಪ, ವಿನೋಧಮ್ಮ, ಬಸವರಾಜಪ್ಪ, ಶಿವಪ್ಪ, ಜಯ್ಯಮ್ಮ, ಜಯಪ್ಪ, ಶೀಲಾ, ನಾಗರಾಜಪ್ಪ , ಶೋಭಾರವರಿಗೆ ಕೈ ಕಾಲಿನಿಂದ ಅವರ ಮೈಕೈಗೆ ಹೊಡೆದು ನೋವುಂಟುಪಡಿಸಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.323 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

7. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ-2, 5, 7, 9 ರವರನ್ನು ಸಾರ್ವಜನಿಕ ಸ್ಥಳದಲ್ಲಿ ಹಿಡಿದು ಎಳೆದಾಡಿ ಅವರ ಮಾನಕ್ಕೆ ಕುಂದುಂಟಾಗುವ ರೀತಿಯಲ್ಲಿ ವರ್ತಿಸಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.354 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

**8.** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ-1 ರಿಂದ 9 ರವರಿಗೆ ಆಸ್ತಿ ಕೊಡದಿದ್ದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.506 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಮೇಲೆ ತಿಳಿಸಿದ ಆರೋಪಣೆಯ ಎಲ್ಲಾ ಸಾರಾಂಶ ತಿಳಿಯಿತೇ?

ಉತ್ತರಃ ಆ-1) ಆ-2)

ಆ-3) ಆ-4)

ಆ-5) ಆ-6)

ಆ-7) ಆ-8)

ಆ-9) ಆ-10)

ಪ್ರಶ್ನೆ 2ಃ- ನೀವು ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

ಉತ್ತರಃ ಆ-1) ಆ-2)

ಆ-3) ಆ-4)

ಆ-5) ಆ-6)

ಆ-7) ಆ-8)

ಆ-9) ಆ-10)

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ಸ್ಥಳ ಃ ಹೊನ್ನಾಳಿ
ದಿನಾಂಕಃ 04-10-2024.

(ದೇವದಾಸ್. ಹೆಚ್)
ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾಳಿ